# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **589** |
| ಸದಸ್ಯರ ಹೆಸರು | : | **ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶಿತರು)** |
| ಉತ್ತರಿಸ ಬೇಕಾದ ದಿನಾಂಕ | : | **16-09-2021** |
| ಉತ್ತರಿಸುವ ಸಚಿವರು | : | **ಮಾನ್ಯ ಜಲಸಂಪನ್ಮೂಲ ಸಚಿವರು** |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಜಲಸಂಪನ್ಮೂಲ ಇಲಾಖೆಯ ಅಧೀನದ ನೀರಾವರಿ ನಿಗಮಗಳು ಕೈಗೊಂಡ 8 ಬೃಹತ್ ಕಾಮಗಾರಿಗಳಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶ್ರೀ ಚಂದ್ರಶೇಖರ್ ಮತ್ತಿತರರು, ಕತ್ರಿಗುಪ್ಪೆ, ಬೆಂಗಳೂರು ಇವರು ದಿನಾಂಕ 12-8-2020 ರಂದು ಸರ್ಕಾರಕ್ಕೆ ಸಲ್ಲಿಸಿರುವ ದೂರು ಅರ್ಜಿಯ ಮೂಲಕ ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ. | ಬಂದಿದ್ದಲ್ಲಿ, ಅವುಗಳ ತನಿಖೆ ನಡೆಸಿ ವರದಿಯನ್ನು ನೀಡುವಂತೆ ಯಾವುದಾದರೂ ಸಮಿತಿಯನ್ನು ರಚಿಸಲಾಗಿತ್ತೇ; | ಹೌದು ರಚಿಸಲಾಗಿದೆ.<br>ಶ್ರೀ ಎಸ್ ಜೆ ಚನ್ನಬಸಪ್ಪ, ನಿವೃತ್ತ ಸರ್ಕಾರದ ಕಾರ್ಯದರ್ಶಿ ಹಾಗೂ ಶ್ರೀ ಎಂ.ಕೆ. ವೆಂಕಟರಾಮ್, ಇವರನ್ನೊಳಗೊಂಡಂತೆ ಸರ್ಕಾರದ ಆದೇಶ ಸಂಖ್ಯೆ ಜಸಂಇ 146 ಸೇಇವಿ 2020, ದಿನಾಂಕ 25.11.2020 ರಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. |

| | | |
|---|---|---|
| ಇ. | ಸಮಿತಿಯನ್ನು ರಚಿಸಿದ್ದಲ್ಲಿ, ಆ ಸಮಿತಿಯು ನಡೆಸಿದ ತನಿಖಾ ವರದಿಯನ್ನು ಸರ್ಕಾರಕ್ಕೆ ಯಾವಾಗ ಸಲ್ಲಿಸಿದೆ; ಆ ವರದಿಯಲ್ಲಿನ ನಿರ್ಣಯಗಳು ಮತ್ತು ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ಸಂಪೂರ್ಣ ವಿವರಗಳನ್ನು ಒದಗಿಸುವುದು) | ಸದರಿ ಸಮಿತಿಯು ದಿನಾಂಕ:01.03.2021 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ.<br><br>ಸದರಿ ವರದಿಯಲ್ಲಿ ಜಲ ಸಂಪನ್ಮೂಲ ಇಲಾಖೆಯ ಅಧೀನದಲ್ಲಿ ಬರುವ 4 ನಿಗಮಗಳ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ 8 ಕಾಮಗಾರಿಗಳ ಅಂದಾಜು ಪಟ್ಟಿಗಳ ತಯಾರಿಕೆಯಲ್ಲಾಗಲೀ ಅಥವಾ ಕಾಮಗಾರಿಗಳ ಅನುಷ್ಠಾನದಲ್ಲಾಗಲೀ ಯಾವುದೇ ಅವ್ಯವಹಾರಗಳು ಸಾಬೀತಾಗಿರುವುದಿಲ್ಲ ; ಈ ಕಾರಣಗಳಿಂದ ಯಾವುದೇ ಅಧಿಕಾರಿಯನ್ನಾಗಲೀ ಅಥವಾ ಗುತ್ತಿಗೇದಾರರನ್ನಾಗಲೀ ಹೊಣೆಗಾರರನ್ನಾಗಿ ಮಾಡಲಾಗದು ; ದೂರುದಾರರು ಮಾಡಿರುವ ಆರೋಪಗಳು ಆಧಾರರಹಿತವಾಗಿವೆ ಮತ್ತು ಹೆಚ್ಚುವರಿಯಾಗಿ ಪಾವತಿಯಾಗಿರುವ / ಪಾವತಿಯಾಗ ಬೇಕಾಗಿರುವ ಸುಮಾರು 52 ಕೋಟಿ ರೂಪಾಯಿಗಳನ್ನು ಸಂಬಂಧಿಸಿದ ಗುತ್ತಿಗೆದಾರರ ಬಿಲ್ಲುಗಳಲ್ಲಿ ಸರಿಹೊಂದಿಸ ಬೇಕೆಂದು ತನಿಖಾ ಸಮಿತಿಯು ಶಿಫಾರಸ್ಸು ಮಾಡಿತ್ತು.<br><br>ಸದರಿ ತನಿಖಾ ವರದಿಯ ಶಿಫಾರಸ್ಸನ್ನು ಒಪ್ಪಿ ತನಿಖಾ ವರದಿಯಲ್ಲಿ ಮಾಡಿರುವ ಸಾಮಾನ್ಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಎಲ್ಲಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿ ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ ಜಸಂಇ 146 ಸೇಇವಿ 2020, ದಿನಾಂಕ 5-7-2021 ರಲ್ಲಿ ಮುಕ್ತಾಯಗೊಳಿಸಿದೆ.<br><br>ತನಿಖಾ ಸಮಿತಿಯು ಮಾಡಿರುವ ಸಾಮಾನ್ಯ ಶಿಫಾರಸ್ಸುಗಳನ್ನು ಹಾಗೂ ದಿನಾಂಕ 5-7-2021 ರ ಸರ್ಕಾರದ ಆದೇಶದ ಪ್ರತಿಯನ್ನು ಇದರೊಂದಿಗೆ ಒದಗಿಸಲಾಗಿದೆ. |

**ಸಂಖ್ಯೆ : ಜಸಂಇ 54 ಸೇಇವಿ 2021.**

**(ಗೋವಿಂದ ಎಂ. ಕಾರಜೋಳ)**

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲಸಂಪನ್ಮೂಲ ಇಲಾಖೆಯಲ್ಲಿ ಬೃಹತ್ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಡಿ.ವೈ. ಉಪ್ಪಾರ್ ಇವರ ಸಹಭಾಗಿತ್ವದ M/s ADU INFRA ಎಂಬ ಗುತ್ತಿಗೆದಾರರು ನಡೆಸುತ್ತಿರುವ ಕಾಮಗಾರಿಗಳ ತನಿಖೆಯನ್ನು ನಡೆಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಜಸಂಇ 73 ಎನ್.ಹೆಚ್.ಪಿ. 2014 ದಿನಾಂಕ 04/02/2015.
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ 121 ಎನ್.ಹೆಚ್.ಪಿ. 2017 ದಿನಾಂಕ 08/11/2017.
3. ಸರ್ಕಾರದ ಆದೇಶ ಸಂಖ್ಯೆ: ಜಸಂಇ 46 ಎನ್ಐಎನ್ 2016 ದಿನಾಂಕ 06/12/2018.
4. ಸರ್ಕಾರದ ಆದೇಶ ಸಂಖ್ಯೆ: ಜಸಂಇ 120 ಎನ್.ಹೆಚ್.ಪಿ. 2018 ದಿನಾಂಕ 28/09/2018.
5. ಸರ್ಕಾರದ ಆದೇಶ ಸಂಖ್ಯೆ: ಜಸಂಇ 41 ಕೆಬಿಎನ್ 2019 ದಿನಾಂಕ 08/03/2019 ಮತ್ತು ಮಾರ್ಪಾಡಿತ ಆದೇಶ ದಿನಾಂಕ 18/07/2019.
6. ಸರ್ಕಾರದ ಆದೇಶ ಸಂಖ್ಯೆ: ಜಸಂಇ 203 ವಿಬ್ಯಾಇ 2012, ದಿನಾಂಕ 17/02/2014
7. ಸರ್ಕಾರದ ಆದೇಶ ಸಂಖ್ಯೆ: ಜಸಂಇ 27 ಎಂ.ಪಿ.ಜಡ್ 2019 ದಿನಾಂಕ 30/10/2019.
8. ಕರ್ನಾಟಕ ವಿಧಾನ ಮಂಡಲದ ವಿಧಾನ ಪರಿಷತ್‌ನ ಸೆಪ್ಟಂಬರ್ ಮಾಹೆಯ ಅಧಿವೇಶನದಲ್ಲಿ M/s ADU INFRA ಎಂಬ ಗುತ್ತಿಗೆದಾರರು/ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಪ್ರಸ್ತಾಪಿಸಿದಂತೆ.
9. ಶ್ರೀ ಚಂದ್ರಶೇಖರ್ ಮತ್ತು ಇತರರು ಕತ್ರಿಗುಪ್ಪೆ, ಬೆಂಗಳೂರು ಇವರು ಮಾನ್ಯ ಮುಖ್ಯ ಕಾರ್ಯದರ್ಶಿಯವರಿಗೆ ಬರೆದಿರುವ ದಿನಾಂಕ: 12.08.2020ರ ಪತ್ರ.
10. ಸರ್ಕಾರದ ಆದೇಶ ಸಂಖ್ಯೆ: ಜಸಂಇ 146 ಸೇಇವಿ 2020, ದಿನಾಂಕ: 25/11/2020
11. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಜಸಂಇ 146 ಸೇಇವಿ 2020, ದಿನಾಂಕ: 04/12/2020
12. ಸತ್ಯ ಶೋಧನಾ ಸಮಿತಿಯ ವರದಿ ದಿನಾಂಕ: 01.03.2021.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ದಿನಾಂಕ: 15.03:2021

* * * * * *

**ಪ್ರಸ್ತಾವನೆ:**

1. ಮೇಲೆ (1)ರಲ್ಲಿ ಓದಲಾದ ದಿನಾಂಕ 04/05/2015 ರ ಸರ್ಕಾರಿ ಆದೇಶದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ದಿನಾಂಕ 14/10/2014 ಮತ್ತು 13/01/2015 ರ ಪ್ರಸ್ತಾವನೆಯನ್ವಯ ವಿಷಯವನ್ನು ಪರಿಶೀಲಿಸಿ ಹೇಮಾವತಿ ಯೋಜನೆಯ ಹೇಮಾವತಿ ಎಡದಂಡೆ ನಾಲೆ ಸರಪಳಿ 0 ರಿಂದ 72.267 ಕಿ.ಮೀ. ವರೆಗಿನ ರಿ-ಮಾಡೆಲಿಂಗ್ ಕಾಮಗಾರಿಯ ರೂ.562.30/- ಕೋಟಿ ಮೊತ್ತದ ಯೋಜನಾ ಅಂದಾಜಿಗೆ ಯೋಜನಾ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

2. ಮೇಲೆ (2)ರಲ್ಲಿ ಓದಲಾದ ದಿನಾಂಕ 08/11/2017 ರ ಸರ್ಕಾರಿ ಆದೇಶದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ದಿನಾಂಕ 27/07/2017

ಪ್ರಸ್ತಾವನೆಯನ್ವಯ ವಿಷಯವನ್ನು ಪರಿಶೀಲಿಸಿ ಹೇಮಾವತಿ ಎಡದಂಡೆ ನಾಲೆ (ಸಾಹುಕಾರ ಚನ್ನಯ್ಯ ನಾಲೆ) ಸರಪಳಿ 72.26 ರಿಂದ 214.30 ಕಿ.ಮೀ. ವರೆಗಿನ ನಾಲೆಯ ಆಧುನೀಕರಣ ಕಾಮಗಾರಿಯ ರೂ.80958.30/- (ಎಂಟು ನೂರ ಒಂಭತ್ತು ಕೋಟಿ, ಐವತ್ತೆಂಟು ಲಕ್ಷದ ಮೂವತ್ತು ಸಾವಿರ ಮಾತ್ರ) ಗಳ ಮೊತ್ತದ ಯೋಜನಾ ಅಂದಾಜಿಗೆ ಯೋಜನಾ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

3. ಮೇಲೆ (3)ರಲ್ಲಿ ಓದಲಾದ ದಿನಾಂಕ 06/12/2018 ರ ಸರ್ಕಾರಿ ಆದೇಶದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರ ದಿನಾಂಕ 31/08/2017 ರ ಪ್ರಸ್ತಾವನೆಯನ್ವಯ ಘಟಪ್ರಭಾ ಎಡದಂಡೆ ಕಾಲುವೆ ಯಡಿ ಬರುವ ಆಧುನೀಕರಣ ಕಾಮಗಾರಿಯ ರೂ.573.28/- ಕೋಟಿ ಮೊತ್ತದ ಯೋಜನಾ ಅಂದಾಜಿಗೆ ಯೋಜನಾ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

4. ಮೇಲೆ (4)ರಲ್ಲಿ ಓದಲಾದ ದಿನಾಂಕ 28/09/2018 ರ ಸರ್ಕಾರಿ ಆದೇಶದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ದಿನಾಂಕ 18/09/2018 ರ ಪ್ರಸ್ತಾವನೆಯನ್ವಯ ವಿಷಯವನ್ನು ಪರಿಶೀಲಿಸಿ, ಹೊಳೆನರಸೀಪುರ ತಾಲ್ಲೂಕು, ಮಾವಿನ ಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ತಾಲ್ಲೂಕಿನ ದುದ್ದ ಹಾಗೂ ಶಾಂತಿ ಗ್ರಾಮ ಹೋಬಳಿಗಳ 160 ಕೆರೆಗಳು ಹಾಗೂ 10 ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ನೀರನ್ನು ಹರಿಸುವ (ತುಂಬಿಸುವ) ಯೋಜನೆಯ ರೂ.333.00 ಕೋಟಿ (ರೂಪಾಯಿ ಮುನ್ನೂರ ಮೂವತ್ತೂರು ಕೋಟಿಗಳು ಮಾತ್ರ) ಗಳ ಯೋಜನಾ ಅಂದಾಜಿಗೆ ಯೋಜನಾ ಇಲಾಖೆಯ, ಆರ್ಥಿಕ ಇಲಾಖೆಯ ಹಾಗೂ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

5. ಮೇಲೆ (5)ರಲ್ಲಿ ಓದಲಾದ ದಿನಾಂಕ 08/03/2019 ಹಾಗೂ 18/07/2019 ರ ಮಾರ್ಪಾಡು ಸರ್ಕಾರಿ ಆದೇಶದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ದಿನಾಂಕ 21/02/2019 ರ ಪ್ರಸ್ತಾವನೆಯನ್ವಯ ವಿಷಯವನ್ನು ಪರಿಶೀಲಿಸಿ, ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-2 ರ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 0.00 ರಿಂದ 95.00 ರವರೆಗಿನ ಕಾಲುವೆ ಜಾಲದ ರೂ.750.00 ಕೋಟಿ ಅಂದಾಜು ಮೊತ್ತದ ಆಧುನೀಕರಣ ಕಾಮಗಾರಿಗೆ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಿದೆ ಮತ್ತು ಮೊದಲನೇ ಹಂತದಲ್ಲಿ ರೂ.375.00 ಕೋಟಿಗಳಿಗೆ ಸೀಮಿತಗೊಳಿಸಿ ಕೈಗೆತ್ತಿಗೊಳ್ಳಲು ಯೋಜನಾ ಅಂದಾಜಿಗೆ ಯೋಜನಾ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

6. ಮೇಲೆ (6)ರಲ್ಲಿ ಓದಲಾದ ದಿನಾಂಕ: 17.02.2014ರ ಆದೇಶದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ದಿನಾಂಕ: 07.02.2014ರ ಪ್ರಸ್ತಾವನೆಯನ್ವಯ ವಿಷಯವನ್ನು ಪರಿಶೀಲಿಸಿ ಎತ್ತಿನಹೊಳೆ ಯೋಜನೆಯ ರೂ 12,912.36 ಕೋಟಿ ಮೊತ್ತದ (2012-13ರ ದರ ಪಟ್ಟಿಯಂತೆ) ಪರಿಷ್ಕೃತ ವಿವರವಾದ ಯೋಜನಾ ಮೊತ್ತಕ್ಕೆ ಆರ್ಥಿಕ ಇಲಾಖೆ ಮತ್ತು ಸಚಿವ ಸಂಪುಟದ ಅನುಮೋದನೆ ಪಡೆದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

7. ಮೇಲೆ (7)ರಲ್ಲಿ ಓದಲಾದ ದಿನಾಂಕ 30/10/2019 ರ ಸರ್ಕಾರಿ ಆದೇಶದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ದಿನಾಂಕ 09/10/2019 ರ ಪ್ರಸ್ತಾವನೆಯನ್ವಯ ವಿಷಯವನ್ನು ಪರಿಶೀಲಿಸಿ ಮಲಪ್ರಭ ಯೋಜನೆಯ ಮಲಪ್ರಭಾ ಮುಖ್ಯ ಕಾಲುವೆ, ಹಂಚು, ಉಪಹಂಚು ಕಾಲುವೆ ಹಾಗೂ ಲ್ಯಾಟರಲ್ಸ್ ಗಳ ಎರಡನೇ ಹಂತದ ಆಧುನೀಕರಣ ಕಾಮಗಾರಿಗಳ ಮೊದಲನೇ ಹಂತದ ರೂ.1,000.00/- ಕೋಟಿಗಳ ಮೊತ್ತದ ಯೋಜನಾ ಅಂದಾಜಿಗೆ

ಯೋಜನಾ ಇಲಾಖೆಯ, ಆರ್ಥಿಕ ಇಲಾಖೆಯ ಹಾಗೂ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

8. ಮೇಲೆ (8)ರಲ್ಲಿ ಓದಲಾದ ದಿನಾಂಕ: 04.12.2020 ರ ಸೇರ್ಪಡೆ ಆದೇಶದಲ್ಲಿ ಪ್ರಸ್ತಾವನೆ ಭಾಗದಲ್ಲಿ 7(ಎ). "ಸರ್ಕಾರದ ಆದೇಶ ಸಂಖ್ಯೆ: ಜಸಂಇ 47 ಎಂಪಿಜೆಡ್ 2017, ದಿನಾಂಕ: 17.08.2017ರಲ್ಲಿ ಅನುಮೋದನೆ ನೀಡಿರುವ "ಮಲಪ್ರಭಾ ಯೋಜನೆಯ ಮಲಪ್ರಭಾ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಯ ಆಧುನೀಕರಣ ಕಾಮಗಾರಿಗಳ ರೂ. 1120.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯ ಕಾಮಗಾರಿಗೆ ಅನುಮೋದನೆಯನ್ನು ನೀಡಲಾಗಿದೆ ಹಾಗೂ ಆದೇಶದ ಭಾಗದಲ್ಲಿ ಆದೇಶದ ಕಂಡಿಕೆ 12ರ ಉಪ ಕಂಡಿಕೆ 7ರ ನಂತರ 8 ಅನ್ನು ಸೇರಿಸಿ "ಮಲಪ್ರಭಾ ಯೋಜನೆಯ ಮಲಪ್ರಭಾ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಯ ಆಧುನೀಕರಣ ಕಾಮಗಾರಿಗಳ ರೂ. 1120.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯ ಕಾಮಗಾರಿಯ ಬಗ್ಗೆ" ಎಂದು ಸೇರ್ಪಡೆಗೊಳಿಸಿ ಆದೇಶಿಸಲಾಗಿದೆ.

9. ಕರ್ನಾಟಕ ವಿಧಾನ ಮಂಡಲದ ವಿಧಾನ ಪರಿಷತ್‌ನ ಸೆಪ್ಟಂಬರ್ ಮಾಹೆಯಲ್ಲಿ ನಡೆದ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸವರಾಜ್ ಪಾಟೀಲ್ ಇಟಗಿ ಹಾಗೂ ಇತರರು ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಕಿ.ಮೀ. 0.00 ರಿಂದ 95ರವರೆಗಿನ ಆಧುನೀಕರಣ ಕಾಮಗಾರಿಯ ಅಂದಾಜು ಮೊತ್ತವನ್ನು ಅನಾವಶ್ಯಕವಾಗಿ ಹೆಚ್ಚುವರಿ ಮಾಡಿ ಟೆಂಡರ್ ನೀಡಿ ಕಳಪೆ ಕಾಮಗಾರಿ ನಿರ್ವಹಿಸಿದ ಬಗ್ಗೆ M/s ADU INFRA ಎಂಬ ಗುತ್ತಿಗೆದಾರರ ವಿರುದ್ಧ ಹಾಗೂ ಇದಕ್ಕೆ ಸಹಕರಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಪ್ರಸ್ತಾಪಿಸಿರುತ್ತಾರೆ.

10. ಮೇಲೆ (9)ರಲ್ಲಿ ಓದಲಾದ ದಿನಾಂಕ 12/08/2020ರಲ್ಲಿ ಶ್ರೀ ಚಂದ್ರಶೇಖರ್ ಮತ್ತು ಇತರರು ಕತ್ರಿಗುಪ್ಪೆ, ಬೆಂಗಳೂರು ಇವರು ಮಾನ್ಯ ಮುಖ್ಯ ಕಾರ್ಯದರ್ಶಿಯವರಗೆ ಸಲ್ಲಿಸಿದ ದೂರರ್ಜಿಯಲ್ಲಿ M/s ADU INFRA ಎಂಬ ಗುತ್ತಿಗೆದಾರರು ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾವೇರಿ ನೀರಾವರಿ ನಿಗಮ ನಿಯಮಿತ ಮತ್ತು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಅಡಿಯಲ್ಲಿ ಬೃಹತ್ ನೀರಾವರಿ ಕಾಮಗಾರಿಗಳನ್ನು ಪಡೆದುಕೊಂಡು ನೈಜ ದರಕ್ಕಿಂತ ಹೆಚ್ಚಿನ ಮೊತ್ತ ದಾಖಲಿಸಿ ಆಡಳಿತಾತ್ಮಕ ಅನುಮೋದನೆ ಪಡೆದು ತದನಂತರ ಸದರಿ ಕಾಮಗಾರಿಗಳಿಗೆ ಹೆಚ್ಚುವರಿ ಮೊತ್ತವನ್ನು ಯಾವುದೇ ಆಧಾರವಿಲ್ಲದೇ ಪರಿಷ್ಕರಿಸಿ ಹೆಚ್ಚಿನ ಮೊತ್ತಕ್ಕೆ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಇದರಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗಿ ಭ್ರಷ್ಟಾಚಾರ ಎಸಗಿದ್ದಾರೆಂದು ಆರೋಪಿಸುತ್ತಾರೆ ಹಾಗೂ ಈ ಸಂಬಂಧ ಹಲವಾರು ಅಧಿಕಾರಿಗಳ ಭಾಗಿಯಾಗಿರುತ್ತಾರೆ ಎಂದು ತಿಳಿಸುತ್ತಾ ಈ ಬಗ್ಗೆ ಸಮಗ್ರ ತನಿಖೆಯನ್ನು ನಡೆಸುವಂತೆ ಆಗ್ರಹಿಸಿರುತ್ತಾರೆ.

11. ಮೇಲೆ (10)ರಲ್ಲಿ ಓದಲಾದ ದಿನಾಂಕ 25.11.2020 ರಲ್ಲಿ ಈ ಕೆಳಕಂಡ ಜಲಸಂಪನ್ಮೂಲ ಇಲಾಖೆಯ ಬೃಹತ್ ಕಾಮಗಾರಿಗಳಲ್ಲಿ ದೋಷಪೂರಿತ ಅಂದಾಜನ್ನು ತಯಾರಿಸಿ ಹಾಗೂ ನಿರ್ಮಾಣದ ಹಂತದಲ್ಲಿ ನಿಯಮಾವಳಿಗಳನ್ನು ಪಾಲಿಸದೇ ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಲು ಅವಕಾಶ ನೀಡಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ನಷ್ಟ ಉಂಟಾಗಿದೆ ಎಂದು ಪ್ರಸ್ತಾಪಿಸಿರುವ ಬಗ್ಗೆ ಸಮಗ್ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಶ್ರೀ ಎಸ್.ಜೆ.ಚನ್ನಬಸಪ್ಪ, ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಹಾಗೂ ಶ್ರೀ ಎಂ.ಕೆ.ವೆಂಕಟರಾಮ್, ಅಂದಿನ ಮುಖ್ಯಮಂತ್ರಿಗಳ ತಾಂತ್ರಿಕ ಸಲಹೆಗಾರರು ಇವರುಗಳೊಂಡಂತೆ ಸತ್ಯ ಶೋಧನಾ ಸಮಿತಿಯನ್ನು ರಚಿಸಿ ಮೂರು ತಿಂಗಳ ಒಳಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸರ್ಕಾರವು ಆದೇಶಿಸಲಾಗಿತ್ತು.

(i) ಹೇಮಾವತಿ ಯೋಜನೆಯ ಹೇಮಾವತಿ ಎಡದಂಡೆ ನಾಲೆ ಸರಪಳಿ 0 ರಿಂದ 72.267 ಕಿ.ಮೀ. ವರೆಗಿನ ರಿ-ಮಾಡೆಲಿಂಗ್ ಕಾಮಗಾರಿಯ ರೂ.562.30/- ಕೋಟಿ ಮೊತ್ತದ ಕಾಮಗಾರಿ ಬಗ್ಗೆ.

(ii) ಹೇಮಾವತಿ ಎಡದಂಡೆ ನಾಲೆ (ಸಾಹುಕಾರ ಚನ್ನಯ್ಯ ನಾಲೆ) ಸರಪಳಿ 72.26 ರಿಂದ 214.30 ಕಿ.ಮೀ. ವರೆಗಿನ ನಾಲೆಯ ಆಧುನೀಕರಣ ಕಾಮಗಾರಿಯ ರೂ.80958.30/- (ಎಂಟು ನೂರ ಒಂಭತ್ತು ಕೋಟಿ, ಐವತ್ತೆಂಟು ಲಕ್ಷದ ಮೂವತ್ತು ಸಾವಿರ ಮಾತ್ರ) ಗಳ ಮೊತ್ತದ ಕಾಮಗಾರಿ ಬಗ್ಗೆ.

(iii) ಘಟಪ್ರಭಾ ಎಡದಂಡೆ ಕಾಲುವೆಯಡಿ ಬರುವ ಆಧುನೀಕರಣ ಕಾಮಗಾರಿಯ ರೂ.573.28/- ಕೋಟಿ ಮೊತ್ತದ ಕಾಮಗಾರಿ ಬಗ್ಗೆ.

(iv) ಹೊಳೆನರಸೀಪುರ ತಾಲ್ಲೂಕು, ಮಾವಿನ ಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ತಾಲ್ಲೂಕಿನ ದುದ್ದ ಹಾಗೂ ಶಾಂತಿ ಗ್ರಾಮ ಹೋಬಳಿಗಳ 160 ಕೆರೆಗಳು ಹಾಗೂ 10 ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ನೀರನ್ನು ಹರಿಸುವ (ತುಂಬಿಸುವ) ಯೋಜನೆಯ ರೂ.333.00 ಕೋಟಿ (ರೂಪಾಯಿ ಮುನ್ನೂರ ಮೂವತ್ತೂರು ಕೋಟಿಗಳು ಮಾತ್ರ) ಗಳ ಮೊತ್ತದ ಕಾಮಗಾರಿ ಬಗ್ಗೆ.

(v) ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-2 ರ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 0.00 ರಿಂದ 95.00 ರವರೆಗಿನ ಕಾಲುವೆ ಜಾಲದ ರೂ.750.00 ಕೋಟಿ ಅಂದಾಜು ಮೊತ್ತದ ಆಧುನೀಕರಣ ಕಾಮಗಾರಿಗೆ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಿದೆ ಮತ್ತು ಮೊದಲನೇ ಹಂತದಲ್ಲಿ ರೂ.375.00 ಕೋಟಿಗಳ ಮೊತ್ತದ ಕಾಮಗಾರಿ ಬಗ್ಗೆ.

(vi) ಎತ್ತಿನಹೊಳೆ ಯೋಜನೆಯ ರೂ 12,912.36 ಕೋಟಿ ಮೊತ್ತದ (2012-13ರ ದರ ಪಟ್ಟಿಯಂತೆ) ಪರಿಷ್ಕೃತ ವಿವರವಾದ ಯೋಜನಾ ಮೊತ್ತಕ್ಕೆ ಅನುಮೋದನೆ ನೀಡಿದ್ದು, ಅದರಡಿಯಲ್ಲಿ ಎತ್ತಿನಹೊಳೆ ವಿಭಾಗ ನಂ.4, ಮಧುಗಿರಿ ವಿಭಾಗದ ಕಾಮಗಾರಿಯಾದ CONSTRUCTION OF GOWRIBIDANUR GRAVITY FEEDER CANAL 0-81 ಕಾಮಗಾರಿಯ ಬಗ್ಗೆ.

(vii) ಮಲಪ್ರಭ ಯೋಜನೆಯ ಮಲಪ್ರಭಾ ಮುಖ್ಯ ಕಾಲುವೆ, ಹಂಚು, ಉಪಹಂಚು ಕಾಲುವೆ ಹಾಗೂ ಲ್ಯಾಟರಲ್ಸ್ ಗಳ ಎರಡನೇ ಹಂತದ ಆಧುನೀಕರಣ ಕಾಮಗಾರಿಗಳ ಮೊದಲನೇ ಹಂತದ ರೂ.1,000.00/- ಕೋಟಿಗಳ ಮೊತ್ತದ ಕಾಮಗಾರಿ ಬಗ್ಗೆ.

(viii) "ಮಲಪ್ರಭಾ ಯೋಜನೆಯ ಮಲಪ್ರಭಾ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಯ ಆಧುನೀಕರಣ ಕಾಮಗಾರಿಗಳ ರೂ. 1120.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯ ಕಾಮಗಾರಿಯ ಬಗ್ಗೆ"

12. ಮೇಲೆ (12)ರಲ್ಲಿ ಓದಲಾದ ದಿನಾಂಕ: 01.03.2021 ರಲ್ಲಿ ಸತ್ಯ ಶೋಧನಾ ಸಮಿತಿಯು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ತನಿಖೆ ನಡೆಸಿ ವಿವರವಾದ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸದರಿ ತನಿಖಾ ವರದಿಯಲ್ಲಿ ಸಮಿತಿಯು ಈ ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡಿರುತ್ತದೆ. ಸಮಿತಿಯ ಶಿಫಾರಸ್ಸುಗಳು ಈ ಕೆಳಕಂಡಂತೆ ಇರುತ್ತದೆ.

*1)* *In the light of the General Comments & General Observations (Chapter-2) and Findings of the Committee traversed under individual works in the respective Chapters (Chapters 3 – 10), the Committee holds that there is no substance in the malicious allegations made by the Complainants, Chandrashekar & others and the Raichur Mitra News paper, which are found to be bald and hollow. There are no convincing & clinching evidences from the records to prove any irregularity allegedly committed by the officials or any fraud by the contractors. All the required procedures are found to*

*have been followed in the process of preparation and sanctioning of the estimates, entrustment of works and the execution of works. If such baseless and false allegations as made out by the complainants are entertained, they are bound to bring down not only the morale of the administrative machinery but also the credibility of the contractors. It would be a travesty of justice to falsely implicate any officials for no fault of theirs on account of such baseless allegations which are nothing short of ulterior motives like gaining cheap publicity. To allege without any basis that there exists a nexus between the officials and the contractors can only be held as hypothetical and preposterous. As such, the Committee rejects all the allegations made by the Complainants in their complaints.*

2) *Regarding the allegation that the estimates were defective, the Committee reiterates, for reasons already explained in Chapter-2 and in the Chapters of individual works (Chapter-3 to 10), that just because there are some deficiencies in the assessment of quantities in embankment items, it is unjustified to label the entire estimates as defective. Given the fact that the estimates have passed through various levels and also cleared by the Estimates Review Committee which is a Technical Experts body, it will be great injustice to hold any particular officials responsible for the deficiencies in the estimates. As the estimates were prepared by Private Consultants who are expected to be experts and professionals in their field, the omissions and commissions in the estimates as discussed in the respective chapters of individual works will have to be inevitably attributed to inadequate investigations by the Private Consultants only. Under these circumstances, the allegation made by the Complainants in this regard is rejected.*

3) *Regarding the allegations that there are irregularities in the entrustment of works, as already discussed in detail under Chapter -2, all the required procedures in terms of the provisions in the KTPP Act have been followed in the tendering process and in the entrustment of works by adopting e-procurement & two cover system with stringent pre-qualification conditions and giving wide publicity to the tender notifications. The tenders have been carefully examined at all levels and cleared by Tender Scrutiny Committee which again is an expert technical body. The Committee thus finds no documentary evidences to prove any irregularities in the entrustment of works.*

4) *As regards the allegation of executing excess quantities resulting in financial losses to Government, the matter has been discussed elaborately under the work-wise Chapters (Chapter – 3 to 10) which reveals that no excess quantities are executed more than what were provided in the contracts or more than what were required on ground except in the work of remodelling of HLBC from Ch.0.00 to 72.26 km where the reasons for the EFI arising from this contract have been examined in depth at various levels before sanctioning (this matter is discussed exhaustively in Chapter – 7). Contrarily there has been marked savings to Government on account of reducing the embankment quantities*

*in the work of modernization of NRBC under KBJNL, which clearly disproves the allegations made by the Complainants in this regard.*

5) *Regarding the allegation that the contractors have got the schedule of rates prepared to their advantage by producing false quotation for the cost of materials in collusion with the officials, the allegation of the Complainant in this regard is nothing short of imagination and therefore held as baseless.*

13. ಕಾಮಗಾರಿಗಳ ಕುರಿತು ಸಮಿತಿಯು ಮಾಡಿರುವ ಶಿಫಾರಸ್ಸುಗಳ ಪ್ರಕಾರ (Work-wise Recommendations) ನಾರಾಯಣಪುರ ಬಲದಂಡೆ ಕಾಲುವೆಯ ಆಧುನೀಕರಣ ಮತ್ತು ಘಟಪ್ರಭಾ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಗಳಲ್ಲಿ Borrow area ದಿಂದ ತಂದಿರುವ ಮಣ್ಣಿನ ಪರಿಮಾಣದಲ್ಲಿ ಕಡಿಮೆ ಮಾಡಿರುವುದು, ಘಟಪ್ರಭಾ ಎಡದಂಡೆ ಕಾಲುವೆಯ ಆಧುನೀಕರಣ ಮತ್ತು ಹೇಮಾವತಿ ಎಡದಂಡೆ ಕಾಲುವೆಯ ಭಾಗವಾದ ಸಾಹುಕಾರ ಚನ್ನಯ್ಯ ಕಾಲುವೆಯ ಆಧುನೀಕರಣ ಕಾಮಗಾರಿಗಳಲ್ಲಿನ excavation in hard rock by controlled blasting ಐಟಂನ ಪರಿಮಾಣದಲ್ಲಿ ಕಡಿತ ಮಾಡಿರುವುದು ಹಾಗೂ ಅದೇ ಸಾಹುಕಾರ ಚೆನ್ನಯ್ಯ ಕಾಲುವೆಯ ಆಧುನೀಕರಣ ಕಾಮಗಾರಿಯಲ್ಲಿ excavated hard rock ನಲ್ಲಿನ stacking charge ನ್ನು ಗುತ್ತಿಗೆದಾರರಿಂದ ವಸೂಲಿ ಮಾಡುವುದು, ಈ ರೀತಿಯಾಗಿ ಹೆಚ್ಚುವರಿ ಪಾವತಿಯಾಗಿರುವ/ ಪಾವತಿಯಾಗಬೇಕಾಗಿರುವ ಒಟ್ಟು ಸುಮಾರು 52 ಕೋಟಿ ರೂ.ಗಳಷ್ಟು ಮೊತ್ತವನ್ನು ಸಂಬಂಧಿಸಿದ ಗುತ್ತಿಗೆದಾರರ ಬಿಲ್ಲುಗಳಲ್ಲಿ ಸರಿಹೊಂದಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

14. ಮೇಲೆ (13)ರಲ್ಲಿ ಓದಲಾದ ದಿನಾಂಕ: 15.03.2021ರಲ್ಲಿ ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ, ಹಾಗೂ ನಾಲ್ಕು ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳನ್ನೊಳಗೊಂಡಂತೆ ನಡೆದ ಸಭೆಯಲ್ಲಿ ಸತ್ಯ ಶೋಧನಾ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ ಚರ್ಚಿಸಲಾಗಿತ್ತು. ಸದರಿ ಸಭೆಯಲ್ಲಿ ಸತ್ಯ ಶೋಧನಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಒಪ್ಪುವುದರ ಜೊತೆಗೆ ಸಮಿತಿಯು ನೀಡಿರುವ ಸಾಮಾನ್ಯ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಅಭಿಪ್ರಾಯವನ್ನು ಸಲ್ಲಿಸಲು ವ್ಯವಸ್ಥಾಪಕ ನಿರ್ದೇಶಕರುಗಳು ಕಾಲಾವಕಾಶ ಕೋರಿರುತ್ತಾರೆ.

15. ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, ಪ್ರಸ್ತಾಪಿಸಿರುವ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಿ ಸತ್ಯಶೋಧನಾ ಜಂಟಿ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ತನಿಖಾ ವರದಿಯಲ್ಲಿನ ಶಿಫಾರಸ್ಸು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ, ತೆಗೆದುಕೊಂಡ ತೀರ್ಮಾನದಂತೆ ಮತ್ತು ನಾಲ್ಕು ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ನೀಡಿದ ಸಹಮತಿಯನ್ನು ಪರಿಗಣಿಸಿ M/s ADU INFRA ಎಂಬ ಗುತ್ತಿಗೆದಾರರು ನಡೆಸುತ್ತಿರುವ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿದೆ ಎಂಬ ಬಗ್ಗೆ ಶ್ರೀ ಚಂದ್ರಶೇಖರ್ ಮತ್ತು ಇತರರು ಸರ್ಕಾರಕ್ಕೆ ಸಲ್ಲಿಸಿರುವ ದೂರರ್ಜಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 146 ಸೇಇವಿ 2020</u>**
**<u>ಬೆಂಗಳೂರು, ದಿನಾಂಕ: 05.07.2021</u>**

16. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಜಲಸಂಪನ್ಮೂಲ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾವೇರಿ ನೀರಾವರಿ ನಿಗಮ ನಿಯಮಿತ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಹಾಗೂ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ವ್ಯಾಪ್ತಿಯಲ್ಲಿ M/s ADU INFRA ಎಂಬ ಗುತ್ತಿಗೆದಾರರು ನಿರ್ವಹಿಸಿದ ಪ್ರಸ್ತಾವನೆಯ ಕಂಡಿಕೆ 11ರಲ್ಲಿ ವಿವರಿಸಿರುವ ಎಲ್ಲಾ

ಎಂಟು ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದಂತೆ, ಸತ್ಯ ಶೋಧನಾ ಸಮಿತಿಯು ತನಿಖೆಯನ್ನು ನಡೆಸಿ ಅನುಬಂಧ 1 ಮತ್ತು 2ರಲ್ಲಿ (Work wise Reccomendation) (ಲಗತ್ತಿಸಿದೆ) ಸರ್ಕಾರಕ್ಕೆ ಸಲ್ಲಿಸಿದ ತನಿಖಾ ವರದಿಯಲ್ಲಿ ವಿವರಿಸಿರುವಂತೆ ಕಾಮಗಾರಿಗಳ ಅಂದಾಜು ಪಟ್ಟಿಗಳ ತಯಾರಿಕೆಯಲ್ಲಾಗಲೀ ಅಥವಾ ಕಾಮಗಾರಿಗಳ ಅನುಷ್ಠಾನದಲ್ಲಾಗಲೀ ಯಾವುದೇ ಅವ್ಯವಹಾರಗಳು ಸಾಬೀತಾಗಿರುವುದಿಲ್ಲವೆಂದೂ ಮತ್ತು ಈ ಕಾರಣಗಳಿಂದಾಗಿ ಯಾವುದೇ ಅಧಿಕಾರಿಯನ್ನಾಗಲಿ ಅಥವಾ ಗುತ್ತಿಗೆದಾರರನ್ನಾಗಲೀ ಹೊಣೆಗಾರರನ್ನಾಗಿ ಮಾಡಲಾಗದು ಎಂದು ಹಾಗೂ ದೂರುದಾರರು ಮಾಡಿರುವ ಆಪಾದನೆಗಳೆಲ್ಲವೂ ಆಧಾರ ರಹಿತವಾಗಿದೆ ಎಂದು ಮತ್ತು ಕಂಡಿಕೆ 13ರಲ್ಲಿ ವಿವರವಾಗಿ ಪ್ರಸ್ತಾಪಿಸಿದಂತೆ ಹೆಚ್ಚುವರಿ ಪಾವತಿಯಾಗಿರುವ/ ಪಾವತಿಯಾಗಬೇಕಾಗಿರುವ ಒಟ್ಟು ಸುಮಾರು 52 ಕೋಟಿ ರೂ.ಗಳಷ್ಟು ಮೊತ್ತವನ್ನು ಸಂಬಂಧಿಸಿದ ಗುತ್ತಿಗೆದಾರರ ಬಿಲ್ಲುಗಳಲ್ಲಿ ಸರಿಹೊಂದಿಸಬೇಕೆಂದು ಸಮಿತಿಯು ಮಾಡಿರುವ ಶಿಫಾರಸ್ಸನ್ನು ಒಪ್ಪಿ ಸರ್ಕಾರವು ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

17. ಸತ್ಯ ಶೋಧನಾ ಸಮಿತಿಯು ಸಲ್ಲಿಸಿರುವ ತನಿಖಾ ವರದಿಯಲ್ಲಿ ಮಾಡಿರುವ ಸಾಮಾನ್ಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಎಲ್ಲಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ಸೂಕ್ತ ಕ್ರಮ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Manjunatha HM 5/7

(ಹೆಚ್. ಎಂ. ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ).

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ, ಲೆಕ್ಕಪರಿಶೋಧನೆ) / (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)/(ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ), ಕರ್ನಾಟಕ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿ., ಬೆಂಗಳೂರು /ಮೈಸೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿ., ಬೆಂಗಳೂರು /ಧಾರವಾಡ
6. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿ., ಬೆಂಗಳೂರು /ಆಲಮಟ್ಟಿ.
7. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿ., ಬೆಂಗಳೂರು /ಚಿತ್ರದುರ್ಗ.
8. ಶ್ರೀ ಎಸ್.ಜಿ.ಚನ್ನಬಸಪ್ಪ, ನಿವೃತ್ತ ಕಾರ್ಯದರ್ಶಿಗಳು, ನಂ.2389, ಪೈಪಲೈನ್ ರಸ್ತೆ, 2ನೇ ಹಂತ, ಕುಮಾರಸ್ವಾಮಿ ಲೇಔಟ್, ಬೆಂಗಳೂರು-560 078.
9. ಶ್ರೀ ಎಂ.ಕೆ.ವೆಂಕಟರಾಮ್, ಅಂದಿನ ಮುಖ್ಯಮಂತ್ರಿಗಳ ತಾಂತ್ರಿಕ ಸಲಹೆಗಾರರು, ನಂ.726, 8ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, (ಇಂದಿರಾ ನಗರ ಕ್ಲಬ್ ಹತ್ತಿರ), ಹೆಚ್.ಎ.ಎಲ್. 2ನೇ ಹಂತ, ಬೆಂಗಳೂರು-560008.
10. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ರವರ ಆಪ್ತ ಕಾರ್ಯದರ್ಶಿಯವರಿಗೆ.
12. ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆರವರ ಆಪ್ತ ಕಾರ್ಯದರ್ಶಿಯವರಿಗೆ.
13. ಸರ್ಕಾರದ ಉಪ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆರವರ ಆಪ್ತ ಸಹಾಯಕರಿಗೆ.
14. ಸರ್ಕಾರದ ಅಧೀನ ಕಾರ್ಯದರ್ಶಿಗಳು (ತಾಂತ್ರಿಕ), ಜಲಸಂಪನ್ಮೂಲ ಇಲಾಖೆ/ ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

## ಅನುಬಂಧ – 1

## FINAL CONCLUSIONS OF THE FACT FINDING COMMITTEE

1. In the light of the General Comments & General Observations and Findings of the Committee traversed under individual works the Committee holds that there is no substance in the malicious allegations made by the Complainants, Chandrashekar & others and the Raichur Mitra News paper, which are found to be bald and hollow. There are no convincing & clinching evidences from the records to prove any irregularity allegedly committed by the officials or any fraud by the contractors. All the required procedures are found to have been followed in the process of preparation and sanctioning of the estimates, entrustment of works and the execution of works. If such baseless and false allegations as made out by the complainants are entertained, they are bound to bring down not only the morale of the administrative machinery but also the credibility of the contractors. It would be a travesty of justice to falsely implicate any officials for no fault of theirs on account of such baseless allegations which are nothing short of ulterior motives like gaining cheap publicity. To allege without any basis that there exists a nexus between the officials and the contractors can only be held as hypothetical and preposterous. As such, the Committee rejects all the allegations made by the Complainants in their complaints.

2. Regarding the allegation that the estimates were defective, the Committee reiterates, that just because there are some deficiencies in the assessment of quantities in embankment items, it is unjustified to label the entire estimates as defective. Given the fact that the estimates have passed through various levels and also cleared by the Estimates Review Committee which is a Technical Experts body, it will be great injustice to hold any particular officials responsible for the deficiencies in the estimates. As the estimates were prepared by Private Consultants who are expected to be experts and professionals in their field, the omissions and commissions in the estimates as discussed in the respective chapters of individual works will have to be inevitably attributed to inadequate investigations by the Private Consultants only. Under these circumstances, the allegation made by the Complainants in this regard is rejected.

3. Regarding the allegations that there are irregularities in the entrustment of works, all the required procedures in terms of the provisions in the KTPP Act have been followed in the tendering process and in the entrustment of works by adopting e-procurement & two cover system with stringent pre-qualification conditions and giving wide publicity to the tender notifications. The tenders have been carefully examined at all levels and cleared by Tender Scrutiny Committee which again is an expert technical body. The Committee thus finds no documentary evidences to prove any irregularities in the entrustment of works.

4. As regards the allegation of executing excess quantities resulting in financial losses to Government, which reveals that no excess quantities are executed more than what were provided in the contracts or more than what were required on ground except in the work of remodelling of HLBC from Ch.0.00 to 72.26 km where the reasons for the EFI arising from this contract have been examined in depth at various levels before sanctioning. Contrarily there has been marked savings to Government on account of reducing the embankment quantities in the work of modernization of NRBC under KBJNL, which clearly disproves the allegations made by the Complainants in this regard.

5. Regarding the allegation that the contractors have got the schedule of rates prepared to their advantage by producing false quotation for the cost of materials in collusion with the officials. the allegation of the Complainant in this regard is nothing short of imagination and therefore held as baseless.

## ಅನುಬಂಧ – 2

**WORK-WISE RECOMMENDATIONS :**

**Modernization of NRBC from Ch.0.00 to 95.00 Km (Chapter-3).**

1. (a) The work is in progress.

(b)The Chief Engineer of KBJNL, O&M Zone, Narayanapur shall ensure strict compliance to his written submissions made to the Committee in the matter of reduction of 1.917 lakh cum (from 49.774 lakh cum provided in Schedule B item No.9 to 47.857 lakh cum) in the quantities of casing embankment. Out of the said revised embankment quantity of 47.857 lakh cum, 5.537 lakh cum shall be deemed to have been executed for the SR & IP portions and outer slopes of embankment by using soil available from excavation and the balance 42.32 lakh cum shall be considered as procured from borrow areas, resulting in a net saving of Rs.42.78 cr.

(c) Since the use of available excavated soil for the said embankment portions results in an extra item, and also since a portion of the quantity already executed with casing soil from borrow areas is now treated as casing embankment with soil available from excavation, an undertaking should be obtained from the contractor expressing his willingness for the re-conciled figures. Suitable adjustments in the quantities of embankment as discussed above may be made in the future RA bills.

(d) The instructions given by Professor Subbarao of IISc on 07.07.2020 in the matter of removing the existing CNS layer completely and replacing it by fresh CNS soil should be scrupulously followed during execution.

(e) The Chief Engineer may get the deep cut reaches from Km.81.390 to Km.81.690 and from Km.84.520 to 85.000 inspected by the concerned Technical Experts Committee and expedite final decision in the matter of providing cut & cover in these reaches, expeditiously.

(f) As opined by Professor Subbarao of IISc on 07.07.2020, the existing lining in cutting reaches shall be tested for compressive strength by taking cores and if the results are within the permissible limits, the lining provided may be retained.

(g) Since the due date of completion of the work as per the contract is 06.12.2020 which is already over, the Chief Engineer in accordance with the assurance given by him to this Committee shall obtain a realistic programme from the contractor for completion of the balance works in all respects including the work in the cutting reaches and that of the structures within a specific time frame and ensure strict compliance to the same. Any default by the contractor to adhere to the said revised programme shall be dealt with seriously and penalised in terms of the contract conditions.

**Modernization of MRBC Main Canal – 1st Work (ERM-1).**

2. The work is completed and final bill is also settled. No specific recommendations are made.

**Modernization of balance works of Malaprabha Canal system – 2nd Work (ERM-2)**

3. The work is in progress. No specific recommendations are made.

**Modernization of Ghataprabha Left Bank Main Canal.**

4. The work is completed.

5. Since a quantity of 1.942 lakh cum available from excavation (this is an extra item) is now considered as re-used on embankment work (for SR & IP portions and for outer slopes of embankment), consequent on which the quantity of casing soil for embankment from approved borrow areas has reduced proportionately (from 31,25,689 cum as provided in Schedule B item No.14 to 29,31,492 cum), it has resulted in a deemed excess payment of Rs.7.13 cr. As the final bill for the work is not yet settled, this deemed excess payment of Rs.7.23 cr., which is a result of mis-conception that the available excavated soil is not suitable for re-use on any portion of the embankment, shall be adjusted in the final bill.

6. In 3 reaches of the canal *viz.* from Km.40.500 to 41.300, Km.53.00 to Km.53.21 & Km.53.42 to Km.53.84, the village limits of Itnal village and Palabhavi village are at a distance of 372m and 385m respectively from the canal.

As they are beyond the limit of 300m and also as there are no power lines, controlled blasting now admitted by the project authorities will have to be disallowed. The total quantity in these 3 reaches is 35083.10 cum. The difference in rate between ordinary blasting and controlled blasting being Rs.309.77 per cum, an amount of Rs.1,08,67,692/-

has been paid in excess. This excess amount of Rs.108.68 lakhs caused due to a mis-judgement of the norms for controlled blasting shall be adjusted in the final bill.

**Remodelling of Hemavathy Left Bank Canal from Ch.0.00 to 72.26 km (1st Work)**

7. (a) The work is completed.

(b) The EFI proposal amounting to Rs.141.92 cr. has been exhaustively scrutinized by the Technical Sub-Committee and also by the EFI Committee at Government Level headed by the Additional Chief Secretary, Finance Department and then finally cleared by the Board of Directors.

(c) Certain allegations of irregularities in the execution of the work have been investigated by the Vigilance Cell of WRD headed by an IPS officer of the rank of IGP and the Vigilance Cell has held in its Report submitted to Government that there was no substance in the Complaint.

(d) The various factors leading to the above said EFI proposal have been investigated by 2 Investigation Officers, the terms of reference being (i) whether the estimate was defective and (ii) whether the excess quantities were executed without following the Rules and Procedures. The Investigation Report submitted by the Investigation Officers, wherein they have concluded that (i) the estimate cannot be held as defective and (ii) all the required Rules and Procedures have been followed in executing the excess quantity, has been accepted by Government in G.O. No. ಜಸಂಇ 35 ಸೇಇವಿ 2019 dated 07.02.2020.

(e) Based on a complaint by one Ramalingaiah, the Lokayukta has conducted detailed investigation and also inspected the work site. After study of records submitted by the officers and after investigations, the Lokayukta has treated the Complaint (Complaint No. LOK/MYS/2263/2018) as closed.

8. **In the light of the above findings, the Committee is of the opinion that no further investigation is warranted in this matter.**

9. Though the work was completed long back i.e. on 30.08.2016 itself, the necessary completion certificate is not yet issued and the final bill is yet to be settled. As so much delay, even after closure of the complaint of similar nature by Lokayukta, is undesirable, the Managing Director and the Chief Engineer shall address these issues without further delay.

**Modernization of Hemavathy Left Bank Canal from Ch.72.26 km to 214.30 (HLBC-2nd work) (Sahukar Channayya Canal).**

10. The work is completed.

11. In the reach from Ch.104640 m to Ch.105000m of the canal, controlled blasting is seen to have been inadvertently admitted even though the village Gurugaranahally is situated at a distance of 398 m from the canal which is more than the limit of 300m. The quantity of hard rock excavation in this reach is 9790 cum. The approved rate for controlled blasting item is Rs.748.05 per cum (Schedule B item No.11) and the same for ordinary blasting is Rs.456.02 per cum (Schedule B item No.10), including 8% tender premium. The difference in rate being Rs.292.03 per cum, excess payment made on this account will thus be Rs.28.59 lakhs. This excess payment which is a result of mis-judgement of the norms for controlled blasting shall be adjusted in the final bill.

12. As the excavated hard rock quantity of 5.82 lakh cum had not been stacked during execution, the stacking charges will have to be deducted from the rate for the finished item of work and only the reduced rate will have to be adopted for payment. The amount of stacking charges shall therefore be recovered and adjusted in the final bill that is due for settlement.

13. In this case also the investigation by Lokayukta has been completed and the complaint filed in this regard has been treated as closed by the Lokayukta in February 2020 itself. Despite this fact, the necessary completion certificate is not yet issued and the final bill is also not yet settled though the work was completed long back i.e. 31.08.2019. As the delay is undesirable, the Managing Director and the Chief Engineer shall address these issues without further delay.

**Dudda Shanthigrama Lift Scheme.**

14. The work is in progress. No specific recommendations are made.

**Construction of Gowribidanur Gravity Feeder Canal.**

15. The work is in progress.

16. The Chief Engineer shall immediately take necessary action to conduct the hydraulic model studies as suggested by the ERC as there is a change in the state of flow in the 2 receiving chambers and the tunnel..

17. The Chief Engineer should pursue with the Railway authorities expeditiously and get the General Arrangement Drawings for the railway crossing immediately after the proposed tunnel.

Manjunath HM 5/7.

(H.M. Manjunath)
Under Secretary to Government,
SHS Water Resources Department(Services-A)